# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1609
ಸದಸ್ಯರ ಹೆಸರು : ಡಾ:ಚಂದ್ರಶೇಖರ್ ಬಿ. ಪಾಟೀಲ್ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 20.03.2020
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಸಹಾಯಕ ನಿರ್ದೇಶಕರು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳ ಜೇಷ್ಠತಾ ಪಟ್ಟಿ ಮತ್ತು ಪದೋನ್ನತಿಗೆ ಸಂಬಂಧಪಟ್ಟಂತೆ ವಿವಿಧ ನ್ಯಾಯಾಲಯಗಳಲ್ಲಿ ಯಾವುದಾದರೂ ಪ್ರಕರಣಗಳು ದಾಖಲಾಗಿದೆಯೇ; | ರಾಜ್ಯ ಮಟ್ಟದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ನ್ಯಾಯಾಲಯಗಳಲ್ಲಿ ಪ್ರಕರಣ ದಾಖಲಾಗಿರುತ್ತವೆ.<br><br>ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಯಿಂದ ಉಪಕಾರ್ಯದರ್ಶಿ (ಹಿರಿಯ ಶ್ರೇಣಿ) ಹುದ್ದೆಗೆ ಪದೋನ್ನತಿ ನೀಡುವ ಸಂಬಂಧ ಒಂದು ಪ್ರಕರಣ ದಾಖಲಾಗಿರುತ್ತದೆ. |
| (ಆ) | ಇದ್ದಲ್ಲಿ, ಎಷ್ಟು ಪ್ರಕರಣಗಳು ಮುಕ್ತಾಯಗೊಂಡಿದೆ ಮತ್ತು ಎಷ್ಟು ಪ್ರಕರಣಗಳು ನ್ಯಾಯಾಲಯಗಲ್ಲಿ ಬಾಕಿ ಇದೆ; ಪ್ರಕರಣಗಳ ಸಂಖ್ಯೆಗಳ ಸಹಿತ ವಿವರ ನೀಡುವುದು? | ದಿನಾಂಕ: 03.03.2010 ರಂದು ಖಾಲಿ ಇದ್ದ 178 ಪಂಚಾಯಿತಿ ವಿಸ್ತರಣಾಧಿಕಾರಿ ಹುದ್ದೆಗಳಿಗೆ ನೋಷನಲ್ ಬಡ್ತಿ ನೀಡಿ ನಂತರ ರಾಜ್ಯ ಮಟ್ಟದ ಪರಿಷ್ಕೃತ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವಂತೆ ಈ ಕೆಳಗಿನ ಪ್ರಕರಣಗಳಲ್ಲಿ ಮಾನ್ಯ ಕೆ.ಎ.ಟಿಯು ದಿನಾಂಕ: 18.03.2019 ರಂದು ಆದೇಶ ನೀಡಿರುತ್ತದೆ.<br><br>**1. ಅರ್ಜಿ ಸಂಖ್ಯೆ 2259 ರಿಂದ 2261/2014 – ಶ್ರೀ. ಗೋಪಾಲಕೃಷ್ಣ ಸಿ ಮತ್ತು ಇತರರು.**<br><br>ದಿನಾಂಕ 21.02.2014 ರಂದು ಪ್ರಕಟಿಸಿರುವ ರಾಜ್ಯ ಮಟ್ಟದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿಯ ಕ್ರಮ ಸಂಖ್ಯೆ 4 ರಿಂದ 23ರ ವರೆಗಿನ ನೌಕರರ ಜೇಷ್ಠತೆಯನ್ನು ರದ್ದುಗೊಳಿಸಿ ಅ ಸ್ಥಳದಲ್ಲಿ ಅರ್ಜಿದಾರರು ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-1 ವೃಂದದಲ್ಲಿ ಸಲ್ಲಿಸಿರುವ ಸೇವೆಯ ಅವಧಿಯನ್ನು ಆಧರಿಸಿ ಅವರ ಹೆಸರನ್ನು ಸೇರಿಸುವುದು ಹಾಗೂ ಎದುರುದಾರರ ಜೇಷ್ಠತೆಯನ್ನು ಅರ್ಜಿದಾರರ ಜೇಷ್ಠತೆಯ ಕೆಳಗೆ ಸೇರಿಸುವುದು. ಮತ್ತು ಅದರಂತೆ ಅವರಿಗೆ ಸಹಾಯಕ ನಿರ್ದೇಶಕರ ಹುದ್ದೆಗೆ ಸ್ವತಂತ್ರ ಪ್ರಭಾರದಲ್ಲಿ ಇರಿಸುವುದು.<br><br>**2. ಅರ್ಜಿ ಸಂಖ್ಯೆ 2782 ರಿಂದ 2792/2014 – ಶ್ರೀ. ಬಿ.ಎಲ್. ಅರವಿಂದ್ ಮತ್ತು ಇತರರು.**<br><br>ದಿನಾಂಕ 21.02.2014 ರಂದು ಪ್ರಕಟಿಸಿರುವ ರಾಜ್ಯ ಮಟ್ಟದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿಯಲ್ಲಿ ಅರ್ಜಿದಾರರಿಗೆ ಹಾಗೂ ಎದುರುದಾರರಿಗೆ ನೀಡಿರುವ ಜೇಷ್ಠತೆಯನ್ನು ಪರಿಷ್ಕರಿಸುವುದು ಹಾಗೂ ಎದುರುದಾರರಿಗೆ ನೀಡಿರುವಂತೆ ತಮಗೂ ಸಹ ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡುವುದು.<br><br>**3. ಅರ್ಜಿ ಸಂಖ್ಯೆ 496 ರಿಂದ 530/2015 – ಶ್ರೀ. ಸುಬ್ಬರಾಜಅರಸ್ ಮತ್ತು ಇತರರು.**<br><br>ದಿನಾಂಕ 18.11.2013 ರಂದು ಪ್ರಕಟಿಸಿದ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ನೀಡಿದ ಜೇಷ್ಠತೆಯನ್ನು ದಿನಾಂಕ 21.02.2014ರ ಜೇಷ್ಠತಾ ಪಟ್ಟಿಯಲ್ಲಿ ಬದಲಿಸಲಾಗಿದ್ದು, ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ಜೇಷ್ಠತೆಯನ್ನು ಮನಃಸ್ಥಾಪಿಸಿ ಅದರಂತೆ ಸೌಲಭ್ಯಗಳನ್ನು ನೀಡುವುದು. |

| | | |
|---|---|---|
| | | **4. ಅರ್ಜಿ ಸಂಖ್ಯೆ 4658 ರಿಂದ 4666/2015 – ಶ್ರೀ. ವಿನಯ್ ಕುಮಾರ್ ಮತ್ತು ಇತರರು.**<br><br>ಅರ್ಜಿದಾರರಿಗೆ ದಿನಾಂಕ 21.02.2014 ರಂದು ಪ್ರಕಟಿಸಿರುವ ರಾಜ್ಯ ಮಟ್ಟದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಜೇಷ್ಠತಾ ಪಟ್ಟಿಯಲ್ಲಿ ನೀಡಿರುವ ಜೇಷ್ಠತೆಯನ್ನು ಬದಲಿಸಿ ಮೆರಿಟ್ ಆಧಾರದ ಮೇಲೆ ಜೇಷ್ಠತೆ ನೀಡುವುದು.<br><br>**5. ಅರ್ಜಿ ಸಂಖ್ಯೆ 3204 ರಿಂದ 3224/2014 – ಶ್ರೀ. ಸಿ. ಶಿವಣ್ಣ ಮತ್ತು ಇತರರು.**<br><br>ದಿನಾಂಕ 21.02.2014ರ ಅಧಿಸೂಚನೆ ಮತ್ತು 19.09.2013ರ ಅಧಿಸೂಚನೆಗಳನ್ನು ರದ್ದುಪಡಿಸಿ ಚಿಕ್ಕಬಳ್ಳಾಪುರ ಜಿಲ್ಲೆಯ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದ ಜೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಿ ಅದರಂತೆ ರಾಜ್ಯ ಮಟ್ಟದ ಜೇಷ್ಠತಾ ಪಟ್ಟಿಯನ್ನು ಪುನರ್ ಪ್ರಕಟಿಸುವುದು.<br><br>ಈ ಆದೇಶದ ವಿರುದ್ಧ ಕೆಲವು ಭಾದಿತ ನೌಕರರು ಮಾನ್ಯ ಉಚ್ಚನ್ಯಾಯಾಲಯದ ಕಲಬುರಗಿ ಪೀಠದಲ್ಲಿ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಗೆ ಸಂಬಂಧಿಸಿದಂತೆ ಮಾನ್ಯ ನ್ಯಾಯಾಲಯವು ಜೇಷ್ಠತಾಪಟ್ಟಿಯನ್ನು ನ್ಯಾಯಾಲಯದ ಮುಂದಿನ ಆದೇಶದವರೆಗೆ ಪ್ರಕಟಿಸದಿರುವಂತೆ ದಿನಾಂಕ: 19.06.2019 ರಂದು ಸ್ಟೇಟಸ್‌ಕೋ ಆದೇಶ ನೀಡಿರುತ್ತದೆ.<br><br>ಮಾನ್ಯ ಕೆ.ಎ.ಟಿ ಯ ಆದೇಶದ ವಿರುದ್ಧ ಸರ್ಕಾರವು ಸಹ ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ : 33613/2019 ರಲ್ಲಿ ಮೇಲ್ಮನವಿ ಸಲ್ಲಿಸಿದ್ದು ಪ್ರಕರಣ ಬಾಕಿಯಲ್ಲಿರುತ್ತದೆ.<br><br>ಪದೋನ್ನತಿಗೆ ಸಂಬಂಧಿಸಿದಂತೆ ಒಂದು ಪ್ರಕರಣ ದಾಖಲಾಗಿದ್ದು, ಬಾಕಿ ಇರುತ್ತದೆ. ಪ್ರಕರಣದ ವಿವರ ಈ ಕೆಳಗಿನಂತಿದೆ.<br><br>ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಕಲಬುರಗಿ ಪೀಠದಲ್ಲಿ ರಿಟ್ ಅರ್ಜಿ ಸಂಖ್ಯೆ:205792/2019 (ಎಸ್-ಕೆಎಟಿ) ದಾಖಲಾಗಿದ್ದು, ಪ್ರಕರಣದಲ್ಲಿ ದಿನಾಂಕ:19-02-2019 ರಂದು ಮಧ್ಯಂತರ ಆದೇಶವಾಗಿದ್ದು, ಸದರಿ ಆದೇಶದ ಮೇಲೆ ಸರ್ಕಾರದಿಂದ ಮೇಲ್ಮನವಿ ಸಲ್ಲಿಸಲು ಕ್ರಮ ವಹಿಸಲಾಗುತ್ತಿದೆ. |

ಸಂ. ಗ್ರಾಅಪ 314 ಗ್ರಾಪಂಅ 2020

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು